# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು– 572 103

**ದಿನಾಂಕ: 16.05.2019 ರಂದು ಬೆಳಿಗ್ಗೆ 10:30 ಗಂಟೆಗೆ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಯವರ ಕೊಠಡಿಯಲ್ಲಿ ನಡೆದ 2019–20ನೇ ಸಾಲಿನ ಪ್ರಥಮ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳು**

**ಹಾಜರಾದ ಸದಸ್ಯರು**

| | | |
|---|---|---|
| 1. | ಪ್ರೊ. ಸಿದ್ದೇಗೌಡ ವೈ.ಎಸ್., ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ ಅ. ದೇವೇಗೌಡ, ವಿಧಾನ ಪರಿಷತ್ ಸದಸ್ಯರು, ಕರ್ನಾಟಕ ಸರ್ಕಾರ, ಬೆಂಗಳೂರು | ಸದಸ್ಯರು |
| 3. | ಶ್ರೀ ಪುರುಷೋತ್ತಮ ರಾವ್ ಸಿಂಧ್ಯ | ಸದಸ್ಯರು |
| 4. | ಶ್ರೀ ನರಸಿಂಹಮೂರ್ತಿ ಸಿ.ಎಸ್. | ಸದಸ್ಯರು |
| 5. | ಶ್ರೀ ನಾರಾಯಣ ಎಂ. | ಸದಸ್ಯರು |
| 6. | ಹೆಚ್.ಎನ್. ವಿಜಯೇಂದ್ರ,<br>ಪ್ರಾಂಶುಪಾಲರು, ಶ್ರೀ ಸಿದ್ಧಾರ್ಥ ಪ್ರಥಮ ದರ್ಜೆ ಮಹಾ ವಿದ್ಯಾಲಯ, ತುಮಕೂರು–05 | ಸದಸ್ಯರು |
| 7. | ಡಾ. ಗುರುಬಸಪ್ಪ ಹೆಚ್.ಡಿ.<br>ಪ್ರಾಂಶುಪಾಲರು, ಶ್ರೀ ಸಿದ್ಧಾರ್ಥ ಶಿಕ್ಷಣ ಮಹಾವಿದ್ಯಾಲಯ, ಡಾ. ಹೆಚ್. ಎಂ. ಗಂಗಾಧರಯ್ಯ ರಸ್ತೆ, ಸರಸ್ವತಿ ಪುರಂ, ಮರಳೂರು ಪೋಸ್ಟ್, ತುಮಕೂರು–572105. | ಸದಸ್ಯರು |
| 8. | ಶಿವಾನಂದಯ್ಯ ಎನ್.ಪಿ.,<br>ಪ್ರಾಂಶುಪಾಲರು, ಶ್ರೀ ಹೊನ್ನಾದೇವಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಂಡಿನಶಿವರ, ತುರುವೇಕೆರೆ ತಾಲ್ಲೂಕು. | ಸದಸ್ಯರು |
| 9. | ಡಾ. ನರಸಿಂಹನ್ ಎಮ್.ಎಸ್.<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್. | ಸದಸ್ಯರು |
| 10. | ಡಿ.ಎಸ್. ಮುನಿಂದ್ರಕುಮಾರ್,<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ. | ಸದಸ್ಯರು |
| 11. | ನಾರಾಯಣ ಕೆ.ಆರ್.,<br>ಪ್ರಾಂಶುಪಾಲರು, ಶ್ರೀಮತಿ ಮತ್ತು ಶ್ರೀ ವೈ.ಇ.ಆರ್. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಾವಗಡ. | ಸದಸ್ಯರು |
| 12. | ಡಾ. ಆನಂದ ಕುಮಾರಿ,<br>ಪ್ರಾಂಶುಪಾಲರು, ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ತುಮಕೂರು | ಸದಸ್ಯರು |
| 13. | ಡಾ. ಬಾಲಪ್ಪ,<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ. | ಸದಸ್ಯರು |

| | | |
|---|---|---|
| 14. | ಡಾ. ಪಿ. ರಾಜಾರೆಡ್ಡಿ,<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿ.ಎಸ್.ಪುರ, ಗುಬ್ಬಿ ತಾಲ್ಲೂಕು. | ಸದಸ್ಯರು |
| 15. | ಡಾ. ಎಸ್.ಬಿ. ಬಸವರೆಡ್ಡಿ,<br>ಪ್ರಾಂಶುಪಾಲರು, ಪಲ್ಲಾಗಟ್ಟೆ ಅಡವಪ್ಪ ಕಲಾ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜು, ತಿಪಟೂರು. | ಸದಸ್ಯರು |
| 16. | ಡಾ. ಕೇಶವ, ಪ್ರಾಧ್ಯಾಪಕರು | ಸದಸ್ಯರು |
| 17. | ಡಾ. ರವೀಂದ್ರ ಕುಮಾರ್ ಬಿ., ಪ್ರಾಧ್ಯಾಪಕರು | ಸದಸ್ಯರು |
| 18. | ಡಾ. ಗುಂಡೂರ್ ನಿಶೀಮಪ್ಪ., ಪ್ರಾಧ್ಯಾಪಕರು | ಸದಸ್ಯರು |
| 19. | ಡೀನರು, ಕಲಾ ನಿಕಾಯ | ಸದಸ್ಯರು |
| 20. | ಡೀನರು, ಕಾನೂನು ನಿಕಾಯ | ಸದಸ್ಯರು |
| 21. | ಡೀನರು, ವಿಜ್ಞಾನ ನಿಕಾಯ | ಸದಸ್ಯರು |
| 22. | ಡೀನರು, ವಾಣಿಜ್ಯ ಮತ್ತು ವ್ಯವಹಾರ ನಿಕಾಯ | ಸದಸ್ಯರು |
| 23. | ಡೀನರು, ಶಿಕ್ಷಣ ನಿಕಾಯ | ಸದಸ್ಯರು |
| 24. | ಡಾ. ಕೊಟ್ರೇಶ್ ಎಂ.<br>ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿರ್ದೇಶಕರು, ತುಮಕೂರು ವಿಶ್ವವಿದ್ಯಾನಿಲಯ | ಸದಸ್ಯರು |
| 25. | ಡಾ. ಕೇಶವ<br>ಯೋಜನೆ, ಮೇಲ್ವಿಚಾರಣೆಯ ಸಮಿತಿಯ ನಿರ್ದೇಶಕರು, ತುಮಕೂರು ವಿಶ್ವವಿದ್ಯಾನಿಲಯ | ಸದಸ್ಯರು |
| 26. | ಡಾ. ಬಿ.ಟಿ. ಸಂಪತ್ ಕುಮಾರ್., ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್ | ಸದಸ್ಯರು |
| 27. | ಹಣಕಾಸು ಅಧಿಕಾರಿಗಳು (ಪ್ರ) | ಸದಸ್ಯರು |
| 28. | ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 29. | ಕುಲಸಚಿವರು | ಸದಸ್ಯ ಕಾರ್ಯದರ್ಶಿ |
| 30. | ಪ್ರೊ. ಕೆ. ನರಹರಿ, ನಿವೃತ್ತ ಪ್ರಾಧ್ಯಾಪಕರು, ಬಿ.ಎಂ.ಎಸ್. ತಾಂತ್ರಿಕ ಮಹಾವಿದ್ಯಾಲಯ, ಬೆಂಗಳೂರು | ಸರ್ಕಾರದಿಂದ ವಿಶೇಷ ಆಹ್ವಾನಿತರು |

## ಹಾಜರಾಗದ ಸದಸ್ಯರು

| | | |
|---|---|---|
| 1. | ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರು ಅಥವಾ ಅವರ ಪ್ರತಿನಿಧಿ<br>ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 2. | ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರು | ಸದಸ್ಯರು |
| 3. | ಶ್ರೀ ಕಾಂತರಾಜ್ (ಬಿಎಂಎಲ್), ವಿಧಾನ ಪರಿಷತ್ ಸದಸ್ಯರು, ಕರ್ನಾಟಕ ಸರ್ಕಾರ, ಬೆಂಗಳೂರು | ಸದಸ್ಯರು |
| 4. | ಪ್ರೊ. ಪರಶುರಾಮ್ ಕೆ.ಜಿ., ಪ್ರಾಧ್ಯಾಪಕರು | ಸದಸ್ಯರು |
| 5. | ಡಾ. ಶಿವಲಿಂಗಸ್ವಾಮಿ ಎಚ್.ಕೆ., ಪ್ರಾಧ್ಯಾಪಕರು | ಸದಸ್ಯರು |

<u>ಪ್ರಸ್ತಾವನೆ:</u>

ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳು ದಿನಾಂಕ:16.05.2019ರ ಗುರುವಾರ ಬೆಳಿಗ್ಗೆ 10:30 ಕ್ಕೆ ನಡೆದ 2019–20ನೇ ಸಾಲಿನ ಪ್ರಥಮ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು. ಸದರಿ ಸಭೆಯಲ್ಲಿ ಈ ಕೆಳಕಂಡ ಕಾರ್ಯಸೂಚಿಗಳ ಬಗ್ಗೆ ಚರ್ಚಿಸಿ ನಿರ್ಣಯಗಳನ್ನು ಕೈಗೊಳ್ಳಲಾಯಿತು.

| ಕ್ರ. ಸಂ. | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ನಿರ್ಣಯಗಳು |
|---|---|---|---|
| ಸಿಂಡಿಕೇಟ್ ವಿಭಾಗ | | | |
| 1 | – | ದಿನಾಂಕ: 26.02.2019 ರಂದು ನಡೆದ ಐದನೇ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ನಡವಳಿಗಳ ದೃಢೀಕರಣ. | ದಿನಾಂಕ:26.02.2019 ರಂದು ನಡೆದ ಐದನೇ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಯನ್ನು ಮಾನ್ಯ ಕುಲಪತಿಗಳು ಎಲ್ಲಾ ಸದಸ್ಯರ ಗಮನಕ್ಕೆ ತಂದು ಸದರಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳಿಗೆ ಈಗಾಗಲೇ ಕೈಗೊಂಡಿರುವ ಕ್ರಮಗಳ ಬಗ್ಗೆ ವಿವರಿಸಿದರು. ಸದರಿ ಸಭೆಯ ನಡವಳಿಯನ್ನು ಪರಿಶೀಲಿಸಿದ ಸಭೆಯು ನಡಾವಳಿಯನ್ನು ಯಥಾವತ್ತಾಗಿ ದೃಢೀಕರಿಸಿತು. |
| ಶೈಕ್ಷಣಿಕ ವಿಭಾಗ | | | |
| 2 | 2019–20.ಸಾ.ವಿ.ವಿ.ಪ.01 ಶೈ.ವಿ–01 | ಸ್ನಾತಕೋತ್ತರ ಇಸ್ಲಾಮಿಕ್ ಸ್ಟಡೀಸ್ ವಿಷಯದ ಅಧ್ಯಯನ ಮಂಡಳಿಯನ್ನು ರಚಿಸಿರುವ ಕುರಿತು ಸ್ಥಿರೀಕರಣ ಕೋರಿ | ಸ್ನಾತಕೋತ್ತರ ಇಸ್ಲಾಮಿಕ್ ಸ್ಟಡೀಸ್ ವಿಷಯದ ಅಧ್ಯಯನ ಮಂಡಳಿಯನ್ನು ರಚಿಸಿ ಅಧಿಸೂಚಿಸಿರುವ ಕ್ರಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಸ್ಥಿರೀಕರಿಸಿತು ಮತ್ತು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |

| | | | |
|---|---|---|---|
| 3 | 2019-20.ಸಾ.ವಿ.ವಿ.ಪ.01 ಶೈ.ವಿ-02 | ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಕೋರ್ಸ್‌ಗಳಿಗೆ ಆನ್‌ಲೈನ್ ಪ್ರವೇಶಾತಿ ಕುರಿತು | ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಕೋರ್ಸ್‌ಗಳಿಗೆ ಆನ್‌ಲೈನ್ ಪ್ರವೇಶಾತಿಗೆ ಸಂಬಂಧಿಸಿದಂತೆ ಭಾರತ ಸರ್ಕಾರದ ಅಧೀನ ಸಂಸ್ಥೆಯಾದ ಐ-ಮೇಡ್ ಸಂಸ್ಥೆಯೊಂದಿಗೆ ಮಾತುಕತೆ ನಡೆಸಿ 2019-20ನೇ ಶೈಕ್ಷಣಿಕ ಸಾಲಿನಿಂದ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೋರ್ಸುಗಳಿಗೆ ಹಾಗೂ ಘಟಕ ಕಾಲೇಜುಗಳ ಸ್ನಾತಕ ಕೋರ್ಸ್‌ಗಳಿಗೆ ಪ್ರವೇಶಾತಿಯ ಅರ್ಜಿಯನ್ನು ಆನ್‌ಲೈನ್ ಮೂಲಕ ಮಾಡಿಕೊಳ್ಳಲು ತೆಗೆದುಕೊಂಡಿರುವ ಕ್ರಮವನ್ನು ಸಭೆಯು ಅನುಮೋದಿಸಿತು. ಮತ್ತು 2019-20ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕೋತ್ತರ ಪ್ರವೇಶಾತಿಗೆ ಸಂಬಂಧಿಸಿದ ಪ್ರವೇಶಾತಿ ಕೈಪಿಡಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲು ಹಾಗೂ ಪ್ರೊಸೆಸಿಂಗ್ ಶುಲ್ಕವಾಗಿ ರೂ. 300 + ಸೇವಾಶುಲ್ಕ (ಸಾಮಾನ್ಯ ಮತ್ತು ಹಿಂದುಳಿದ ವರ್ಗ), 150+ ಸೇವಾಶುಲ್ಕ (ಎಸ್.ಸಿ., ಎಸ್.ಟಿ. ಮತ್ತು ಸಿ-1) ಗಳನ್ನು ಪಡೆಯಲು ಅನುಮೋದಿಸಿತು ಹಾಗೂ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 4 | 2019-20.ಸಾ.ವಿ.ವಿ.ಪ.01 ಶೈ.ವಿ-03 | 2019-20ನೇ ಶೈಕ್ಷಣಿಕ ಸಾಲಿನಿಂದ ಹೊಸ ಸ್ನಾತಕೋತ್ತರ ಕೋರ್ಸ್‌ಗಳನ್ನು ಪ್ರಾರಂಭಿಸುವ ಕುರಿತು | 2019-20ನೇ ಶೈಕ್ಷಣಿಕ ಸಾಲಿನಿಂದ ಹೊಸ 10 ಹೊಸ ಸ್ನಾತಕೋತ್ತರ ಕೋರ್ಸ್‌ಗಳನ್ನು 30 ಪ್ರವೇಶ ಮಿತಿಯೊಂದಿಗೆ ಪ್ರಾರಂಭಿಸಲು ಅನುಮೋದಿಸಿತು ಹಾಗೂ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 5 | 2019-20.ಸಾ.ವಿ.ವಿ.ಪ.01 ಶೈ.ವಿ-04 | ಸ್ನಾತಕೋತ್ತರ ಗಣಕ ವಿಜ್ಞಾನ ವಿಷಯದ ಅಧ್ಯಯನ ಮಂಡಳಿಯನ್ನು ರಚಿಸಿರುವ ಕುರಿತು ಸ್ಥಿರೀಕರಣ ಕೋರಿ | ಸ್ನಾತಕೋತ್ತರ ಗಣಕ ವಿಜ್ಞಾನ ವಿಷಯದ ಅಧ್ಯಯನ ಮಂಡಳಿಯನ್ನು ರಚಿಸಿ ಅಧಿಸೂಚಿಸಿರುವ ಕ್ರಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಸ್ಥಿರೀಕರಿಸಿತು ಮತ್ತು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 6 | 2019-20.ಸಾ.ವಿ.ವಿ.ಪ.01 ಶೈ.ವಿ-05 | ಸ್ನಾತಕೋತ್ತರ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಷಯದ ಅಧ್ಯಯನ ಮಂಡಳಿಯನ್ನು ರಚಿಸಿರುವ ಕುರಿತು ಸ್ಥಿರೀಕರಣ ಕೋರಿ | ಸ್ನಾತಕೋತ್ತರ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಷಯದ ಅಧ್ಯಯನ ಮಂಡಳಿಯನ್ನು ರಚಿಸಿ ಅಧಿಸೂಚಿಸಿರುವ ಕ್ರಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಸ್ಥಿರೀಕರಿಸಿತು ಮತ್ತು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 7 | 2019-20.ಸಾ.ವಿ.ವಿ.ಪ.01 ಶೈ.ವಿ-06 | ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೋರ್ಸ್‌ಗಳ ಸಿ.ಬಿ.ಸಿ.ಎಸ್ ವಿನಿಯಮದಲ್ಲಿ ಚಾಲೆಂಜ್ ಮೌಲ್ಯಮಾಪನವನ್ನು ಅಳವಡಿಸಿಕೊಳ್ಳುವ ಕುರಿತು | ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು ಈ ಹಿಂದಿನ ವಿನಿಯಮದಲ್ಲಿ ಉಲ್ಲೇಖಿತವಾಗಿರುವ ಚಾಲೆಂಜ್ ಮೌಲ್ಯಮಾಪನದ ಕ್ರಮವನ್ನು (ಪ್ರತಿ ಉತ್ತರ ಪತ್ರಿಕೆಗೆ ರೂ. 1000.00 ದ ಬದಲು Fee fixed by University from |

| | | | |
|---|---|---|---|
| | | | time to time ಎಂದು ಬದಲಾಯಿಸಿ) ಅನುಮೋದಿಸಿತು. ಹಾಗೂ ಮೇಲ್ಕಂಡ ಅಂಶಗಳನ್ನು ಸಿ.ಬಿ.ಸಿ.ಎಸ್. ವಿನಿಯಮದಲ್ಲಿ ಅಳವಡಿಸಿ ತಿದ್ದುಪಡಿ ವಿನಿಯಮವನ್ನು ಘನತೆವೆತ್ತ ಕುಲಾಧಿಪತಿಗಳ ಅನುಮೋದನೆ ಪಡೆಯಲು ಸರ್ಕಾರಕ್ಕೆ ಕಳುಹಿಸಲು ಅನುಮೋದಿಸಿತು ಹಾಗೂ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು.<br>ಪ್ರಸ್ತುತ ರೂ. 1300.00 ಗಳನ್ನು ಚಾಲೆಂಜ್ ಮೌಲ್ಯಮಾಪನ (ಪ್ರತಿ ಉತ್ತರ ಪತ್ರಿಕೆಗೆ) ಶುಲ್ಕವನ್ನಾಗಿ ನಿಗದಿಪಡಿಸಲು ತೀರ್ಮಾನಿಸಿ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 8 | **2019-20.ಸಾ.ವಿ.ವಿ.ಪ.01 ಶೈ.ವಿ-07** | ವಿಶ್ವವಿದ್ಯಾನಿಲಯದ ವಿವಿಧ ಹೊಸ ಸ್ನಾತಕೋತ್ತರ ವಿಷಯಗಳ ಅಧ್ಯಯನ ಮಂಡಳಿಯನ್ನು ರಚಿಸಿರುವ ಕುರಿತು ಸ್ಥಿರೀಕರಣ ಕೋರಿ | ವಿಶ್ವವಿದ್ಯಾನಿಲಯದ ವಿವಿಧ ಹೊಸ ಸ್ನಾತಕೋತ್ತರ ವಿಷಯಗಳ ಅಧ್ಯಯನ ಮಂಡಳಿಯನ್ನು ರಚಿಸಿ ಅಧಿಸೂಚಿಸಿರುವ ಕ್ರಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಸ್ಥಿರೀಕರಿಸಿತು ಮತ್ತು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 9 | **2019-20.ಸಾ.ವಿ.ವಿ.ಪ.01 ಶೈ.ವಿ-08** | ವಿಶ್ವವಿದ್ಯಾನಿಲಯ ಕಲಾ ಕಾಲೇಜು ಹಾಗೂ ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜುಗಳಲ್ಲಿನ ಸ್ನಾತಕ ಪದವಿಗಳ ವಿವಿಧ ಕಾಂಬಿನೇಷನ್‌ಗಳಿಗೆ ಈಗಾಗಲೇ ನಿಗದಿಪಡಿಸಲಾಗಿದ್ದಂತಹ ಪ್ರವೇಶ ಮಿತಿಯನ್ನು ಶೇಕಡಾ 20 ರಷ್ಟು ಹೆಚ್ಚಿಸಿ ನಿಗದಿಪಡಿಸಿರುವ ಕುರಿತು – ಸ್ಥಿರೀಕರಣ ಕೋರಿ. | ವಿಶ್ವವಿದ್ಯಾನಿಲಯ ಕಲಾ ಕಾಲೇಜು ಹಾಗೂ ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜುಗಳಲ್ಲಿನ ಸ್ನಾತಕ ಪದವಿಗಳ ವಿವಿಧ ಕಾಂಬಿನೇಷನ್‌ಗಳಿಗೆ ಈಗಾಗಲೇ ನಿಗದಿಪಡಿಸಲಾಗಿದ್ದಂತಹ ಪ್ರವೇಶ ಮಿತಿಯನ್ನು ಶೇಕಡಾ 20 ರಷ್ಟು ಹೆಚ್ಚಿಸಿ ನಿಗದಿಪಡಿಸಿ ಅಧಿಸೂಚಿಸಿರುವ ಕ್ರಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಸ್ಥಿರೀಕರಿಸಿತು ಮತ್ತು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 10 | **2019-20.ಸಾ.ವಿ.ವಿ.ಪ.01 ಶೈ.ವಿ-09** | MHRD ರವರಿಂದ 'Reservation for Economically Weaker Section (EWSs) for Admission in Central Educational Institutions' ಕುರಿತು ಹೊರಡಿಸಿರುವ ಕಛೇರಿ ಜ್ಞಾಪನದಲ್ಲಿರುವ ಅಂಶಗಳನ್ನು ಅನುಷ್ಠಾನಗೊಳಿಸುವ ಬಗ್ಗೆ. | MHRD ರವರಿಂದ 'Reservation for Economically Weaker Section (EWSs) for Admission in Central Educational Institutions' ಕುರಿತು ಹೊರಡಿಸಿರುವ ಕಛೇರಿ ಜ್ಞಾಪನದಲ್ಲಿರುವ ಅಂಶಗಳಿಗನುಗುಣವಾಗಿ ವಿಶ್ವವಿದ್ಯಾನಿಲಯದಲ್ಲಿ 2019-20ನೇ ಶೈಕ್ಷಣಿಕ ಸಾಲಿನಿಂದ ಶೇಕಡ 10 ರಷ್ಟು ಪ್ರವೇಶ ಮಿತಿಯನ್ನು ಹೆಚ್ಚಿಸಿ ಉಲ್ಲೇಖಿತ ಜ್ಞಾಪನದಲ್ಲಿ ತಿಳಿಸಿರುವ ಅರ್ಹ ವಿದ್ಯಾರ್ಥಿಗಳಿಗೆ ಪ್ರವೇಶಾತಿಯಲ್ಲಿ ಮೀಸಲಾತಿಯನ್ನು ನೀಡಲು ಅನುಮೋದಿಸಿತು ಮತ್ತು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 11 | **2019-20.ಸಾ.ವಿ.ವಿ.ಪ.01 ಶೈ.ವಿ-10** | ಸ್ನಾತಕ ದೈಹಿಕ ಶಿಕ್ಷಣ ವಿಷಯದ ಅಧ್ಯಯನ ಮಂಡಳಿಯನ್ನು ರಚಿಸಿರುವ ಕುರಿತು ಸ್ಥಿರೀಕರಣ ಕೋರಿ. | ಸ್ನಾತಕ ದೈಹಿಕ ಶಿಕ್ಷಣ ವಿಷಯದ ಅಧ್ಯಯನ ಮಂಡಳಿಯನ್ನು ರಚಿಸಿ ಅಧಿಸೂಚಿಸಿರುವ ಕ್ರಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಸ್ಥಿರೀಕರಿಸಿತು ಮತ್ತು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |

| | | | |
|---|---|---|---|
| **ಸಾಮಾನ್ಯ ಮತ್ತು ಅಭಿವೃದ್ಧಿ ವಿಭಾಗ** | | | |
| 12 | **2019–20.ಸಾ.ವಿ.ವಿ.ಪ.01 ಸಾ/ಅ. ವಿಭಾಗ.–1** | ತುಮಕೂರು ವಿಶ್ವವಿದ್ಯಾನಿಲಯದ ಹಳೆಯ ವಿದ್ಯಾರ್ಥಿ ಸಂಘದ ನೋಂದಣಿ ಮತ್ತು ಬೈಲಾವನ್ನು ಸಲ್ಲಿಸಿರುವ ಕುರಿತು. | ತುಮಕೂರು ವಿಶ್ವವಿದ್ಯಾನಿಲಯದ ಹಳೆಯ ವಿದ್ಯಾರ್ಥಿ ಸಂಘವನ್ನು ರಚಿಸಿ ಬೈಲಾವನ್ನು ಸಿದ್ಧಪಡಿಸಿ ಸಂಘವನ್ನು ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿ, ತುಮಕೂರು ಜಿಲ್ಲೆ ಇಲ್ಲಿ ನೋಂದಾವಣೆ ಮಾಡಿರುವ ಕ್ರಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು ಮತ್ತು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 13 | **2019–20.ಸಾ.ವಿ.ವಿ.ಪ.01 ಸಾ/ಅ. ವಿಭಾಗ.–2** | ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಕರ್ನಾಟಕ ಸರ್ಕಾರದ ಅನುದಾನದೊಂದಿಗೆ "ಜುಂಜಪ್ಪ ಅಧ್ಯಯನ ಪೀಠ"ವನ್ನು ಸ್ಥಾಪಿಸುವ ಕುರಿತು. | ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಕರ್ನಾಟಕ ಸರ್ಕಾರದ ಅನುದಾನದೊಂದಿಗೆ "ಜುಂಜಪ್ಪ ಅಧ್ಯಯನ ಪೀಠ"ವನ್ನು ಸ್ಥಾಪಿಸುವ ಸಂಬಂಧ ಸರ್ಕಾರದ ಮಾರ್ಗಸೂಚಿಯಂತೆ, "ಜುಂಜಪ್ಪ ಅಧ್ಯಯನ ಪೀಠ" ಸ್ಥಾಪನೆಯ ಪರಿಷ್ಕರಿಸಿರುವ ಪರಿನಿಯಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿ, ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಬಹುದೆಂದು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| **ಕಾಲೇಜು ಅಭಿವೃದ್ಧಿ ಪರಿಷತ್** | | | |
| 14 | **2019–20.ಸಾ.ವಿ.ವಿ.ಪ.01 ಕಾ.ಅ.ಪ –01** | 2019–20ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಮುಂದುವರಿಕೆ ವರದಿಯ ಕುರಿತು. | ಸ್ವಾಮಿ ವಿವೇಕಾನಂದ ಕಾಲೇಜ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್, ತುಮಕೂರು ಈ ಕಾಲೇಜಿನ 2019–20ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಮುಂದುವರಿಕೆಗೆ ಸಂಬಂಧಿಸಿದಂತೆ, ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಒಪ್ಪಿ ಸದರಿ ಕಾಲೇಜಿಗೆ ಸಂಯೋಜನೆ ಮುಂದುವರಿಕೆಗೆ ಅನುಮೋದನೆ ನೀಡಿ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 15 | **2019–20.ಸಾ.ವಿ.ವಿ.ಪ.01 ಕಾ.ಅ.ಪ –02** | 2019–20ನೇ ಶೈಕ್ಷಣಿಕ ಸಾಲಿನ ಹೊಸ ಕಾಲೇಜು ಸಂಯೋಜನೆ ಸಂಬಂಧಿಸಿದ ಸ್ಥಳೀಯ ವಿಚಾರಣಾ ಸಮಿತಿಯ ವರದಿಯ ಕುರಿತು. | ಶ್ರೀ ಚನ್ನಬಸವೇಶ್ವರ ಸ್ವಾಮಿ ಗ್ರಾಮಾಂತರ ವಿದ್ಯಾಸಂಸ್ಥೆ (ರಿ), ಗುಬ್ಬಿ, ತುಮಕೂರು ಜಿಲ್ಲೆ, ರವರ ಗುಬ್ಬಿ ಸಿ.ಐ.ಟಿ. ಪ್ರಥಮ ದರ್ಜೆ ಕಾಲೇಜು ಗುಬ್ಬಿ, ಈ ಕಾಲೇಜಿನ 2019–20ನೇ ಶೈಕ್ಷಣಿಕ ಸಾಲಿನ ಹೊಸ ಕಾಲೇಜು ಸಂಯೋಜನೆಗೆ ಸಂಬಂಧಿಸಿದಂತೆ, ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು ಒಪ್ಪಿ ಸದರಿ ಕಾಲೇಜಿನ ಹೊಸ ಸಂಯೋಜನೆ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆ ಪಡೆಯಲು ಅಗತ್ಯ ಕ್ರಮ ವಹಿಸಬಹುದೆಂದು ತೀರ್ಮಾನಿಸಿ, ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |

| | | | |
|---|---|---|---|
| **ಹಣಕಾಸು ವಿಭಾಗ** | | | |
| 16 | **2019-20.ಸಾ.ವಿ.ವಿ.ಪ.01 ಹಣಕಾಸು ವಿಭಾಗ.-1** | 2015-16ನೇ ಸಾಲಿನ ರಾಜ್ಯ ಲೆಕ್ಕಪತ್ರಗಳ ಇಲಾಖೆಯ ಲೆಕ್ಕ ಪರಿಶೋಧನಾ ವರದಿಗೆ ಕರಡು ಅನುಪಾಲನಾ ವರದಿಯನ್ನು ಅನುಮೋದಿಸುವ ಬಗ್ಗೆ. | ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ ಇವರು 2015-16ನೇ ಸಾಲಿನ ರಾಜ್ಯ ಲೆಕ್ಕಪತ್ರಗಳ ಇಲಾಖೆಯ ಲೆಕ್ಕ ಪರಿಶೋಧನಾ ವರದಿಗೆ ಸಿದ್ಧಪಡಿಸಿರುವ ಕರಡು ಅನುಪಾಲನಾ ವರದಿಯ ಮುಖ್ಯ ಸಾರಾಂಶವನ್ನು ಸಭೆಯ ಗಮನಕ್ಕೆ ತಂದರು. ಕೂಲಕಂಷವಾಗಿ ಪರಿಶೀಲಿಸಿದ ಸಭೆಯು ಕರಡು ಅನುಪಾಲನಾ ವರದಿಯನ್ನು ಅನುಮೋದಿಸಿ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 17 | **2019-20.ಸಾ.ವಿ.ವಿ.ಪ.01 ಹಣಕಾಸು ವಿಭಾಗ.-2** | 2018-19ನೇ ಸಾಲಿನಲ್ಲಿ ಹಣಕಾಸು ಅಧಿಕಾರಿಗಳು ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಹೆಸರಿನಲ್ಲಿ ನಿರ್ವಹಿಸಲಾಗುತ್ತಿರುವ ಬ್ಯಾಂಕ್ ಖಾತೆಗಳ ವಿವರದ ಬಗ್ಗೆ. | 2018-19ನೇ ಸಾಲಿನಲ್ಲಿ ಹಣಕಾಸು ಅಧಿಕಾರಿಗಳು ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಹೆಸರಿನಲ್ಲಿ ನಿರ್ವಹಿಸಲಾಗುತ್ತಿರುವ ಬ್ಯಾಂಕ್ ಖಾತೆಗಳ ವಿವರದ ಬಗ್ಗೆ ಹಣಕಾಸು ಅಧಿಕಾರಿಗಳು ಸಭೆಯ ಎಲ್ಲಾ ಸದಸ್ಯರ ಗಮನಕ್ಕೆ ತಂದರು. ಹಣಕಾಸು ಅಧಿಕಾರಿಗಳ ಹೆಸರಿನಲ್ಲಿ ನಿರ್ವಹಿಸಲಾಗುತ್ತಿರುವ ಬ್ಯಾಂಕ್ ಖಾತೆಗಳ ವಿವರಗಳನ್ನು ಅನುಮೋದಿಸಿದ ವಿದ್ಯಾವಿಷಯಕ ಪರಿಷತ್ ಸಭೆಯು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 18 | **2019-20.ಸಾ.ವಿ.ವಿ.ಪ.01 ಹಣಕಾಸು ವಿಭಾಗ.-3** | 2019-20ನೇ ಸಾಲಿನ ವ್ಯವಹಾರಿಕ ಆಯವ್ಯಯವನ್ನು ಅನುಮೋದಿಸುವ ಬಗ್ಗೆ | ತುಮಕೂರು ವಿಶ್ವವಿದ್ಯಾನಿಲಯದ 2019-20ನೇ ಸಾಲಿನ ಯೋಜನೆ ಮತ್ತು ಯೋಜನೇತರ ಲೆಕ್ಕಶೀರ್ಷಿಕೆಯಡಿಯಲ್ಲಿ ಸರ್ಕಾರದಿಂದ ನಿಗದಿಯಾದ ಅನುದಾನ ಮತ್ತು ವಿಶ್ವವಿದ್ಯಾನಿಲಯಕ್ಕೆ ಬರಬಹುದಾದ ಅನುದಾನಗಳ ವಿವರಗಳ ವ್ಯವಹಾರಿಕ ಆಯವ್ಯಯವನ್ನು ಅನುಮೋದಿಸಿದ ವಿದ್ಯಾವಿಷಯಕ ಪರಿಷತ್ ಸಭೆಯು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| **ಪರೀಕ್ಷಾಂಗ ವಿಭಾಗ** | | | |
| 19 | **2019-20.ಸಾ.ವಿ.ವಿ.ಪ.01 ಪರಿಕ್ಷಾ ವಿಭಾಗ.-1** | ವಿವಿಧ ಸ್ನಾತಕ ಪದವಿ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳ ಪರೀಕ್ಷಾ ಅಕ್ರಮ ಚಟುವಟಿಕೆಗಳ ವಿಚಾರಣಾ ಸಮಿತಿಯ ನಡವಳಿಯ ಚರ್ಚೆ ಮತ್ತು ನಿರ್ಣಯ ಕೋರಿ. | 2018-19ನೇ ಸಾಲಿನ 2018ರ ಅಕ್ಟೋಬರ್/ ನವೆಂಬರ್ ಮಾಹೆಗಳಲ್ಲಿ ಜರುಗಿದ ವಿವಿಧ ಸ್ನಾತಕ ಪದವಿ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾದ ವಿದ್ಯಾರ್ಥಿಗಳ ವಿರುದ್ಧ ಪರೀಕ್ಷಾ ಅಕ್ರಮ ಚಟುವಟಿಕೆಗಳ ವಿಚಾರಣಾ ಸಮಿತಿಯು ಕೈಗೊಂಡ ಕ್ರಮಗಳನ್ನು ಕುಲಸಚಿವರು (ಪರೀಕ್ಷಾಂಗ) ರವರು ಸಭೆಯ ಗಮನಕ್ಕೆ ತಂದರು, ಸದರಿ ನಡಾವಳಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು ನಡವಳಿಯನ್ನು ಅನುಮೋದಿಸಿ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |

| | | | |
|---|---|---|---|
| **ಶೈಕ್ಷಣಿಕ ವಿಭಾಗ** | | | |
| 20 | **2019-20.ಸಾ.ವಿ.ವಿ.ಪ.01 ಶೈ.ವಿ-11** | 2019-20ನೇ ಶೈಕ್ಷಣಿಕ ಸಾಲಿಗೆ ವಿವಿಧ ಸ್ನಾತಕೋತ್ತರ ಕೋರ್ಸ್‌ಗಳ (ಎಂ.ಬಿ.ಎ. & ಎಂ.ಸಿ.ಎ. ಹೊರತುಪಡಿಸಿ) ಪ್ರವೇಶಾತಿಗೆ ಸೀಟ್‌ಮ್ಯಾಟ್ರಿಕ್ಸ್ ಮತ್ತು ಶುಲ್ಕ ನಿಗದಿಪಡಿಸುವ ಕುರಿತು. | 2019-20ನೇ ಶೈಕ್ಷಣಿಕ ಸಾಲಿಗೆ ವಿವಿಧ ಸ್ನಾತಕೋತ್ತರ ಕೋರ್ಸ್‌ಗಳ (ಎಂ.ಬಿ.ಎ. & ಎಂ.ಸಿ.ಎ. ಹೊರತುಪಡಿಸಿ) ಪ್ರವೇಶಾತಿಗೆ ಸೀಟ್‌ಮ್ಯಾಟ್ರಿಕ್ಸ್ ಮತ್ತು ಶುಲ್ಕ ನಿಗದಿಪಡಿಸಲು ರಚಿಸಲಾಗಿದ್ದ ಸಮಿತಿಯ ವರದಿಯನ್ನು ಸಭೆಯು ಪರಿಶೀಲಿಸಿತು. ಸಮಿತಿಯ ಶಿಫಾರಸ್ಸಿನಂತೆ ಬೇಡಿಕೆ ಇರುವ ಕೋರ್ಸ್‌ಗಳಿಗೆ ಸರ್ಕಾರದ ವಿವಿಧ ಆದೇಶಗಳನ್ವಯ ಪ್ರವೇಶ ಮಿತಿಯನ್ನು ನಿಗದಿಪಡಿಸಲು ಅನುಮೋದಿಸಿತು. ಮುಂದುವರೆದು ಬೇಡಿಕೆ ಕಡಿಮೆ ಇರುವಂತಹ ಕೋರ್ಸ್‌ಗಳಿಗೆ ಸಮಿತಿಯ ಶಿಫಾರಸ್ಸಿನಂತೆ ಪ್ರವೇಶ ಮಿತಿ ನಿಗಧಿಪಡಿಸಲು ಹಾಗೂ ಒಂದು ವೇಳೆ ಪ್ರವೇಶಾತಿ ವೇಳೆ ಸದರಿ ಕೋರ್ಸ್‌ಗಳಿಗೆ ಬೇಡಿಕೆ ಹೆಚ್ಚಿದ್ದಲ್ಲಿ ಉಳಿದ ಕೋರ್ಸ್‌ಗಳಿಗೆ ಪ್ರವೇಶ ಮಿತಿಯನ್ನು ನಿಗದಿಪಡಿಸಿದಂತೆ ಕ್ರಮವಹಿಸಲು ಅನುಮೋದಿಸಿತು. ಮುಂದುವರೆದು ಸಮಿತಿಯ ವರದಿಯಂತೆ ಶುಲ್ಕ ನಿಗದಿಪಡಿಸಲು (**M.B.A-Business Analytics** ಹೊರತುಪಡಿಸಿ) ವಿದ್ಯಾವಿಷಯಕ ಪರಿಷತ್ ತೀರ್ಮಾನಿಸಿತು ಹಾಗೂ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 21 | **2019-20.ಸಾ.ವಿ.ವಿ.ಪ.01 ಶೈ.ವಿ-12** | "ಮಹಿಳಾ ಅಧ್ಯಯನ" ವಿಷಯವನ್ನು ಸ್ನಾತಕ ಪದವಿಯಲ್ಲಿ ಮುಕ್ತ ಆಯ್ಕೆಯ ವಿಷಯವನ್ನಾಗಿ ಅಳವಡಿಸಿಕೊಳ್ಳುವ ಸಂಬಂಧ ಅಧ್ಯಯನ ಮಂಡಳಿ ಸಲ್ಲಿಸಿರುವ ಪಠ್ಯಕ್ರಮದ ಅನುಮೋದನೆ ಕುರಿತು. | "ಮಹಿಳಾ ಅಧ್ಯಯನ" ವಿಷಯವನ್ನು ಸ್ನಾತಕ ಪದವಿಯಲ್ಲಿ ಮುಕ್ತ ಆಯ್ಕೆಯ ವಿಷಯವನ್ನಾಗಿ ಅಳವಡಿಸಿಕೊಳ್ಳುವ ಸಂಬಂಧ ಅಧ್ಯಯನ ಮಂಡಳಿ ಸಲ್ಲಿಸಿರುವ ಪಠ್ಯಕ್ರಮವನ್ನು ಮತ್ತು ಸಭಾ ನಡಾವಳಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು ಮತ್ತು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 22 | **2019-20.ಸಾ.ವಿ.ವಿ.ಪ.01 ಶೈ.ವಿ-13** | 2019-20ನೇ ಸಾಲಿನ ವಿವಿಧ ಸ್ನಾತಕ ಪದವಿ ಕೋರ್ಸುಗಳ ಪ್ರವೇಶ ಶುಲ್ಕವನ್ನು ನಿಗದಿಪಡಿಸಿ, ಅಧಿಸೂಚಿಸಿರುವ ಕುರಿತು ಸ್ಥಿರೀಕರಣ ಕೋರಿ. | 2019-20ನೇ ಸಾಲಿನ ವಿವಿಧ ಸ್ನಾತಕ ಪದವಿ ಕೋರ್ಸುಗಳ ಪ್ರವೇಶ ಶುಲ್ಕವನ್ನು ನಿಗದಿಪಡಿಸಿ, ಅಧಿಸೂಚಿಸಿರುವ ಕ್ರಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಸ್ಥಿರೀಕರಿಸಿತು ಮತ್ತು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| **ಪರೀಕ್ಷಾಂಗ ವಿಭಾಗ** | | | |
| 23 | **2019-20.ಸಾ.ವಿ.ವಿ.ಪ.01 ಪರಿಕ್ಷಾ ವಿಭಾಗ.-2** | 2019-20ರ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕೋತ್ತರ ಪದವಿಗಳ ಪರೀಕ್ಷೆಗಳ ಪೂರ್ವ ಸಿದ್ಧತೆಗಾಗಿ ಪರೀಕ್ಷಾ ಮಂಡಳಿಗಳನ್ನು ರಚಿಸಿ ಪರೀಕ್ಷಾ ಕಾರ್ಯಗಳನ್ನು ಕೈಗೊಂಡಿರುವ ಕುರಿತು. | 2019-20ರ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕೋತ್ತರ ಪದವಿಗಳ ಪರೀಕ್ಷೆಗಳ ಪೂರ್ವ ಸಿದ್ಧತೆಗಾಗಿ ಪರೀಕ್ಷಾ ಮಂಡಳಿಗಳನ್ನು ರಚಿಸಿ ಪರೀಕ್ಷಾ ಕಾರ್ಯಗಳನ್ನು ಕೈಗೊಂಡಿರುವ ಕ್ರಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಸ್ಥಿರೀಕರಿಸಿತು ಮತ್ತು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |

| ಹೆಚ್ಚುವರಿ ಕಾರ್ಯಸೂಚಿ | | | |
|---|---|---|---|
| ಕಾಲೇಜು ಅಭಿವೃದ್ಧಿ ಪರಿಷತ್ | | | |
| 24 | 2019-20.ಸಾ.ವಿ.ವಿ.ಪ.01 ಕಾ.ಅ.ಪ -03 | 2019-20ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆ ನವೀಕರಣಕ್ಕೆ ಮರುತಪಾಸಣೆ ನಡೆಸಿ ಶಿಫಾರಸ್ಸು ಮಾಡಿ ವರದಿ ಸಲ್ಲಿಸಿರುವ ಕುರಿತು. | 2019-20ನೇ ಶೈಕ್ಷಣಿಕ ಸಾಲಿಗೆ ಸರ್ವೋದಯ ಪ್ರಥಮ ದರ್ಜೆ ಕಾಲೇಜು, ತುಮಕೂರು ಈ ಕಾಲೇಜಿನ ಸಂಯೋಜನೆ ನವೀಕರಣಕ್ಕೆ ಸಂಬಂಧಿಸಿದಂತೆ, ಮರುತಪಾಸಣೆ ನಡೆಸಿ ಸಂಯೋಜನೆ ನವೀಕರಣಕ್ಕೆ ಶಿಫಾರಸ್ಸು ಮಾಡಿರುವ ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು ಮತ್ತು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |

ಕುಲಸಚಿವರು
ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಮಾನ್ಯ ಕುಲಪತಿಗಳು
ಕುಲಪತಿಗಳು
ತುಮಕೂರು ವಿಶ್ವವಿದ್ಯಾಲಯ
ತುಮಕೂರು